೭) ಖಾಸಗಿ ವಿಮಾನ ಕೊಳಗಳ ನಿರ್ಮಾಣಕ್ಕಾಗಿ ಸಹಾಯಧನ.

೮) ಜಲಾಶಯ ವಿಮಾನುಗಾರಿಕೆ ಅಭಿವೃದ್ಧಿ.

೯) ಸಾಂಪ್ರದಾಯಿಕ ವಿಮಾನುಗಾರಿಕೆ ಅಭಿವೃದ್ಧಿಗೆ ಸಹಾಯಧನ.

೧೦) ವಿಮಾನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳು.

೧೧) ಸಂಸ್ಕರಣೆ, ಸಂರಕ್ಷಣೆ ಮತ್ತು ಮಾರುಕಟ್ಟೆ.

೧೨) ವಿಮಾನುಗಾರರ ಸಹಕಾರಿ ಸಂಘಗಳಿಗೆ ಸಹಾಯಧನ.

೧೩) ಮತ್ಸ್ಯಲಯ ಸ್ಥಾಪನೆ.

೧೪) ಪ್ರದರ್ಶನ ಮತ್ತು ತರಬೇತಿ.

೧೫) ಕೇಂದ್ರ ಪುರಸ್ಕೃತ ವಿಮಾನುಗಾರರ ಕಲ್ಯಾಣ ಯೋಜನೆ ಇತ್ಯಾದಿ.

(ಆ) ಗುಲ್ಬರ್ಗಾ ಜಿಲ್ಲೆಯಲ್ಲಿ ಆ ಯೋಜನೆಗಳಿಗಾಗಿ ೧೯೯೧–೯೨ ರ ಸಾಲಿನಲ್ಲಿ ರೂ. ೭.೬೭೭ ಲಕ್ಷಗಳನ್ನು ಮತ್ತು ೧೯೯೨–೯೩ನೇ ಸಾಲಿನಲ್ಲಿ ರೂ. ೧೯.೩೯೭ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

(ಇ) ಆ ಯೋಜನೆಗಳಿಗಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ೧೯೯೧–೯೨, ೧೯೯೨–೯೩ ರ ಸಾಲಿಗೆ ಮಾಡಲಾದ ತಾಲ್ಲೂಕುವಾರು ವೆಚ್ಚದ ವಿವರಗಳು ಕೆಳಕಂಡಂತಿವೆ :

(ರೂ. ಲಕ್ಷಗಳಲ್ಲಿ)

ಕ್ರ ಸಂಖ್ಯೆ	ತಾಲ್ಲೂಕುಗಳ ಹೆಸರು	೧೯೯೧–೯೨	೧೯೯೨–೯೩
೧	ಚಿಂಚೋಳಿ	೦.೩೦೬	೦.೨೯೫
೨	ಚಿತ್ತಾಪುರ	೦.೩೨೬	೦.೧೭೫
೩	ಗುಲ್ಬರ್ಗಾ	೦.೮೨೬	೨.೩೮೫
೪	ಆಳಂದ	೦.೪೩೬	೦.೨೨೫
೫	ಆಫಜಲ್‌ಪುರ	೦.೧೭೬	೦.೦೭೫
೬	ಷಹಪುರ	೨.೬೦೩	೧೫.೨೭೮
೭	ಶೋರಾಪುರ	೦.೪೩೬	೦.೩೬೯
೮	ಜೇವರ್ಗಿ	೦.೦೭೬	೦.೦೭೫
೯	ಸೇಡಂ	೦.೧೨೬	೦.೦೭೫
೧೦	ಯಾದಗಿರಿ	೨.೩೬೬	೦.೪೪೫
	ಒಟ್ಟು	೭.೬೭೭	೧೯.೩೯೭

ಕ್ಷೀರ ಯೋಜನೆಯಡಿಯಲ್ಲಿ ಶಾಲೆಗಳಿಗೆ ಹಾಲು ಪೂರೈಕೆ—ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಣ ಬಿಡುಗಡೆ

೪೭೭(೭೪೯) ಶ್ರೀ ಗುರುಪಾದಪ್ಪ ನಗಮಾರಪಲ್ಲಿ (ಔರಾದ್). — ಪಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಕ್ಷೀರಾ ಯೋಜನೆಯಡಿಯಲ್ಲಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಹಾಲು ಪೂರೈಕೆ ಮಾಡುತ್ತಿರುವುದು ನಿಜವೇ?

(ಆ) ಈ ಹಾಲನ್ನು ಕಾಯಿಸಿ ಸಕ್ಕರೆ ಬೆರೆಸಿ ಸಂಬಂಧಪಟ್ಟ ಸ್ಥಳಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳು ಶಾಲೆಗೆ ಸರಬರಾಜು ಮಾಡುತ್ತಿರುವುದು ನಿಜವೇ?

(ಇ) ಸರಬರಾಜು ಮಾಡಿದ ಹಾಲು ಮತ್ತು ಅದಕ್ಕೆ ತಗಲುವ ವೆಚ್ಚವನ್ನು ಬಿಡುಗಡೆ ಮಾಡುವಲ್ಲಿ ಸರ್ಕಾರ ವಿಳಂಬ ಮಾಡುತ್ತಿರುವುದು ನಿಜವೇ?

(ಈ) ಹಾಗಿದ್ದಲ್ಲಿ ಅದಕ್ಕಾಗಿ ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಬೇಕಾಗಿದೆ ?

(ಉ) ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಹಣ ಬಿಡುಗಡೆಯಾಗದಿರುವುದರಿಂದ ಹಾಲನ್ನು ನೀಡುವ ರೈತರುಗಳಿಗೆ ಹಣ ಪಾವತಿ ಮಾಡದೇ ತೊಂದರೆಯಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ?

(ಊ) ಸರ್ಕಾರ ಆ ಬಗ್ಗೆ ಕೂಡಲೇ ಸೂಕ್ತ ಕ್ರಮ ಕೈಗೊಂಡು ಸಂಬಂಧಪಟ್ಟ ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಬಾಕಿ ಇರುವ ಹಣವನ್ನು ಕೂಡಲೇ ಬಿಡುಗಡೆ ಮಾಡುವುದೇ?

ಶ್ರೀ ಕೆ. ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು).—

(ಅ) ಸರ್ಕಾರಿ ಪ್ರಾಥಮಿಕ ಶಾಲೆಯ ೧ನೇ ತರಗತಿಯ ಮಕ್ಕಳಿಗೆ ಮಾತ್ರ ಹಾಲು ಸರಬರಾಜು ಮಾಡಲಾಗುತ್ತಿದೆ.

(ಆ) ನಿಜ.

(ಇ) ದಿನಾಂಕ ೧೫ನೇ ಮಾರ್ಚ್ ೧೯೯೪ ರ ಅಂತ್ಯಕ್ಕೆ ರೂ. ೧೨.೫೫ ಕೋಟಿ ಹಣ ಬಾಕಿ ಇದ್ದು ಇದುವರೆವಿಗೆ ರೂ. ೪.೦೦ ಕೋಟಿ ಹಣವನ್ನು ಕರ್ನಾಟಕ ಹಾಲು ಮಹಾ ಮಂಡಳಿಗೆ ಬಿಡುಗಡೆ ಮಾಡಲಾಗಿದೆ. ಉಳಿದ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

(ಈ) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

(ಉ) ಹೌದು.

(ಊ) ಬಾಕಿ ಹಣ ಬಿಡುಗಡೆಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

ನಾಗರ ಹೊಳೆ ಅರಣ್ಯದಲ್ಲಿ ಬೆಂಕಿ ಬಿದ್ದ ಬಗ್ಗೆ

೪೭೯(೭೫೩) ಶ್ರೀ ಜಿ. ರಾಜಗೌಡ (ಹನೂರು).—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಕಳೆದ ಎರಡು ವರ್ಷಗಳಿಂದ ಇಲ್ಲಿಯವರೆಗೆ ನಾಗರಹೊಳೆ ಅರಣ್ಯಕ್ಕೆ ಎಷ್ಟು ಸಾರಿ ಬೆಂಕಿ ಬಿದ್ದಿದೆ?

(ಆ) ಎಷ್ಟು ಪ್ರಕರಣದಲ್ಲಿ ಆಕಸ್ಮಿಕ ಹಾಗೂ ಎಷ್ಟು ಪ್ರಕರಣದಲ್ಲಿ ಉದ್ದೇಶಪೂರ್ವಕವಾಗಿ ನಡೆದಿದೆ?

(ಇ) ಆ ಪ್ರಕರಣಗಳ ವಿಚಾರಣೆ ಯಾವ ಹಂತ ಮುಟ್ಟಿದೆ?

(ಈ) ಸರ್ಕಾರಕ್ಕೆ ಆಗಿರುವ ನಷ್ಟ ಎಷ್ಟು?

(ಉ) ನಾನಾಜಿ ಮತ್ತು ಪಡ್ಡಿ ಎಂಬ ಹಾಡಿಗೆ ಯಾವಾಗ ಭೇಟಿ ನೀಡಲಾಗಿದೆ?

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು).—

(ಅ) ಎರಡು ಸಲ.

(ಆ) ೧೯೯೨ನೇ ಸಾಲಿನ ಒಂದು ಪ್ರಕರಣದಲ್ಲಿ ಉದ್ದೇಶಪೂರ್ವಕವಾಗಿ ಬೆಂಕಿ ಹಚ್ಚಲಾಗಿದೆ. ೧೯೯೪ನೇ ಸಾಲಿನಲ್ಲಿ ಕಾಡಿನ ಬೆಂಕಿ ಪ್ರಕರಣವು ವರದಿಯಾಗಿದ್ದು ಅದಕ್ಕೆ ಕಾರಣವನ್ನು ಇನ್ನೂ ಪತ್ತೆ ಹಚ್ಚಿರುವುದಿಲ್ಲ.

(ಇ) ೧೯೯೨ ರ ಬೆಂಕಿಯ ಪ್ರಕರಣದಲ್ಲಿ ತನಿಖೆ ನಡೆಸಿದ ಸಿ.ಒ.ಡಿ, ವಿಭಾಗದವರು ಸರ್ಕಾರಕ್ಕೆ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ೧೯೯೪ ರ ಬೆಂಕಿ ಪ್ರಕರಣದ ಬಗ್ಗೆ ಸರ್ಕಾರ ಯಾವ ತನಿಖೆಗೂ ಆದೇಶ ಮಾಡಿರುವುದಿಲ್ಲ.